ಮಧ್ಯಂತರ ಅರ್ಜಿ ಸಂಖ್ಯೆ **10** ರ ಮೇಲೆ ಆದ ಆದೇಶದ ಮೇರೆಗೆ ದಿಃ **17-06-2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ.**1**(ಎ, ಬಿ, ಸಿ) ರವರ ಪರ ವಕೀಲರಾದ ಶ್ರೀ ಎಸ್ ಬಿ ಹೆಚ್ ರವರಿಂದಃ

1. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಪ್ರತಿವಾದಿ ನಂ.1 ರವರಿಗೆ ಅನ್ಯಕ್ರಾಂತವಾಗಿರುವ ಕುರಿತು ವಿಚಾರ ಮಾಡಿ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತು 1972-73 ರಲ್ಲಿ ಅನ್ಯಕ್ರಾಂತವಾಗಿರುತ್ತದೆ. ಸರ್ವೆ ನಂ.316/2 ಬಿ ಜಮೀನಿನಲ್ಲಿ ಒಟ್ಟು ಎಷ್ಟು ನಿವೇಶನಗಳು ಇದ್ದವು ಎಂಬುದು ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಮಂಜೂರಾತಿ ಹಾಗೂ ನಕ್ಷೆಯನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಈ ದಾವೆಯಲ್ಲಿ ದಾವಾ ಸ್ವತ್ತಿನ ಕುರಿತು ಆದ ಅನ್ಯಕ್ರಾಂತ ಆದೇಶವನ್ನಾಗಲಿ, ನಕ್ಷೆಯನ್ನಾಗಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಅದರಂತೆ ದಾವೆ ಸಲ್ಲಿಸುವ ಪೂರ್ವದಲ್ಲಿ ಸದರಿ ದಾಖಲಾತಿಗಳನ್ನು ನನ್ನ ವಕೀಲರಿಗೆ ನೀಡಿದ್ದೆ.

2. ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ. ಪ್ರತಿವಾದಿಯರ ಪ್ರತಿವಾದ ಪತ್ರದ ಕುರಿತು ನನ್ನ ವಕೀಲರೂ ಸಹ ನನಗೆ ಮಾಹಿತಿ ನೀಡಿರುವುದಿಲ್ಲ. ನಿಡಿ.1 ರ ದಾಖಲೆಯು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಡಿ-1 ರ ದಾಖಲೆ 1990-91 ರಿಂದ 2001-02 ರ ವರೆಗೆ ಉರ್ಜಿತವಾಗಿರುತ್ತದೆ ಎಂದು ಷರಾ ಹಾಕಿರುತ್ತಾರೆ ಎಂದರೆ ಸರಿ. ನಿಡಿ-1 ರ ದಾಖಲೆಯ ಕಾಲಂ ನಂಬರ 9 ರಲ್ಲಿ ಭೀಮಪ್ಪ ಅಡಿವೆಪ್ಪ ಕಿತ್ತೂರು, ಬಾಲಪ್ಪಾ ಅಡಿವೆಪ್ಪ ರವರ ಹೆಸರು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಮೃತರಾದ ನಂತರ ಗಂಗವ್ವ, ಬಸವರಾಜು, ಅಡಿವೆಪ್ಪ ರವರ ಹೆಸರು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭೀಮಪ್ಪಾ ಮತ್ತು ಬಾಲಪ್ಪಾ ರವರು ದಿಃ 20-08-1993 ರಂದು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಡೈರಿ ನಂ.5143 ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಡೈರಿಯ ಪ್ರಕಾರ ದಾವಾ ಅನುಸೂಚಿ ಸ್ವತ್ತು ಬಾಲಪ್ಪಾರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಬಾಲಪ್ಪಾರವರು ಮೃತರಾದ ನಂತರ 1995 ರಲ್ಲಿ ಡೈರಿ ನಂ.6120 ರ ಪ್ರಕಾರ ಬಾಲಪ್ಪಾರವರ ಹೆಂಡತಿ, ಮಕ್ಕಳಾದ ಪ್ರತಿವಾದಿ ನಂ.2 ರಿಂದ 4 ರವರ ಹೆಸರು ದಾವಾ ಸ್ವತ್ತಿನ ಮಾಲಿಕರು ಎಂದು ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

3. ಈ ದಾವೆಯಲ್ಲಿ ಹಿಂದೆ ನನ್ನ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲು ಆದ ನಂತರವಾದರೂ ದಾವಾ ಸ್ವತ್ತಿನ ಹಳೆಯ ದಾಖಲೆಗಳನ್ನು ನಾನು ತೆಗೆದು ನೋಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಸದರಿ ಭೀಮಪ್ಪಾ ಅಡಿವೆಪ್ಪಾ ಕಿತ್ತೂರರವರಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆ ಎಂಬುವುದನ್ನೂ ಸಹ ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಇವತ್ತಿನವರೆಗೂ ಸಹ ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ನನಗೆ ಇಲ್ಲ, ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿ ಗುರುತಿಸಿಕೊಂಡ ನಿಪಿ-1 ರ ದಾಖಲೆಯನ್ನು

ನಾನು ಓದಿ, ತಿಳಿದುಕೊಂಡು ಹಾಜರುಪಡಿಸಿರುತ್ತೇನೆ. ಈಗ ಪ್ರಸ್ತುತವಾಗಿ ದಾವಾ ಸ್ವತ್ತಿನ ದಾಖಲಾತಿಗಳಲ್ಲಿ ಯಾರ ಹೆಸರು ಬರುತ್ತದೆ ಎಂಬುವುದನ್ನು ಸಹ ನಾನು ನೋಡಿ, ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ ನಂ.5 ರವರು ಖರೀದಿಸಿದ ನಂತರ ಅವರ ಹೆಸರು ಡೈರಿಯಲ್ಲಿ ಬಂದಿತ್ತು ಎಂದರೆ ಸರಿ. ನಂತರ ಪ್ರತಿವಾದಿ ನಂ.5 ರವರು ಪ್ರತಿವಾದಿ ನಂ.6 ರವರಿಗೆ ಮಾರಾಟ ಮಾಡಿದ ನಂತರ ಅವರ ಹೆಸರು ಹಕ್ಕು ದಾಖಲೆಗಳ ಡೈರಿಯಲ್ಲಿ ನಮೂದಾಗಿತ್ತು ಎಂದರೆ ಸರಿ. ಸದರಿ ಡೈರಿಗಳನ್ನು ನಾನು ಪ್ರಶ್ನಿಸಿ ಯಾವುದೇ ಅರ್ಜಿಯನ್ನಾಗಲಿ, ಅಪೀಲನ್ನಾಗಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾನು ಯಾವುದೇ ಋಣಭಾರವನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನೋಡಿರುವುದಿಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗು ನನಗೂ ಯಾವುದೆ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.